# ಶಿಬಿ ಜಾತಕ

**ಸ್ವಾಮಿ ವೀರೇಶಾನಂದ**

ನಮ್ಮ ಭಗವಂತನಾದ ಬೋಧಿಸತ್ವನು ನೂರಾರು ಕಷ್ಟನಷ್ಟಗಳನ್ನು ಅನುಭವಿಸಿ ಸದ್ಧರ್ಮವನ್ನು ಅನೇಕ ಜನ್ಮಗಳ ಪರ್ಯಂತ ಅಭ್ಯಾಸ ಮಾಡಿದ್ದಾನೆ. ಇಂಥ ಕಠೋರವಾದ ಸಾಧನೆಯನ್ನು ಅವನು ಮಾಡಿದ್ದು ನಮ್ಮ ಸಲುವಾಗಿಯೇ; ನಮಗೆ ನಿಜವಾದ ಧರ್ಮ ಯಾವುದು ಎಂದು ತೋರಿಸಿಕೊಡಲೆಂದೇ. ಹೀಗಾಗಿ ಅವನ ಬೋಧನೆಯನ್ನು ಒಳಗೊಂಡ ಈ ಗಾಥೆಗಳನ್ನು ಏಕಾಗ್ರಚಿತ್ತರಾಗಿ ನಾವು ಕೇಳಬೇಕು.

ನಮ್ಮ ಪ್ರಭುವಾದ ಬೋಧಿಸತ್ವನು ಪೂರ್ವಜನ್ಮಗಳಲ್ಲಿ ಮಾಡಿದ ಅಪರಿಮಿತ ಪುಣ್ಯಕರ್ಮಗಳ ಸಲುವಾಗಿ ಶಿಬಿಗಳ ರಾಜನಾಗಿ ಜನ್ಮತಳೆದನು. ಅವನು ಬಾಲ್ಯದಲ್ಲಿಯೇ ಹಿರಿಯರನ್ನು ಗೌರವಿಸುತ್ತಿದ್ದನು; ವಿನಯಪೂರ್ವಕವಾಗಿ ನಡೆದುಕೊಳ್ಳುತ್ತಿದ್ದನು; ಪ್ರಜೆಗಳ ಪ್ರೀತಿಯನ್ನು ಸಂಪಾದಿಸಿದ್ದನು. ಇದಲ್ಲದೆ ಸಹಜವಾಗಿ ತನಗೆ ಒದಗಿಬಂದ ಬುದ್ಧಿಮತ್ತೆಯ ಪರಿಣಾಮವಾಗಿ, ಅನೇಕ ವಿದ್ಯೆಗಳಲ್ಲಿ ಪಾರಂಗತನಾದನು. ದೈವೀಭೂತವಾಗಿ ಬಂದ ಅಪ್ರತಿಮ ಶಕ್ತಿಸಂಪನ್ನನಾಗಿದ್ದನು. ಅಧಿಕಾರ, ವೈಭವಗಳು ಅವನದಾಗಿದ್ದವು. ಪ್ರಜೆಗಳನ್ನು ತನ್ನ ಮಕ್ಕಳೆಂದೇ ಪರಿಪಾಲಿಸುತ್ತಿದ್ದನು.

ಧರ್ಮ, ಅರ್ಥ, ಕಾಮಗಳೇ ಮೊದಲಾಗಿ ಎಲ್ಲ ರೀತಿಯ ಸಂಪನ್ನತೆಯೂ ಅವನಲ್ಲಿ ಮನೆಮಾಡಿತ್ತು. ಅವನು ಯಾವ ವಿರೋಧಾಭಾಸಗಳೂ ಇಲ್ಲದೆ ನಿಜವಾದ ಸಂತೋಷವನ್ನು ಅನುಭವಿಸುತ್ತಿದ್ದನು. ಉದಾರಹೃದಯದವನೂ, ಅನುಕಂಪೆಯಿಂದ ಕೂಡಿದವನೂ ಆಗಿದ್ದ ನಮ್ಮ ಸ್ವಾಮಿಯಲ್ಲಿ ಒಂದು ವಿಶೇಷಗುಣ ಮನೆಮಾಡಿತ್ತು. ಅದೆಂದರೆ, ತನ್ನಿಂದ ದಾನಪಡೆದು ಹೋಗುವ ತಾಪಸಿಗಳ ಮುಖಾರವಿಂದದಲ್ಲಿ ಮೂಡುತ್ತಿದ್ದ ಮುಗ್ಧ ಆನಂದಾನುಭೂತಿಯನ್ನು ಕಂಡು ಅವನು ಸಂತೃಪ್ತಿ ಮತ್ತು ಉಲ್ಲಾಸದಿಂದ ಬೀಗುತ್ತಿದ್ದನು. ಅವರ ಮುಖಗಳಲ್ಲಿ ನಗುವನ್ನು ತರಲು ಏನನ್ನೂ ಕೊಡಲು ಸಿದ್ಧನಾಗಿದ್ದನು.

ಹೀಗಾಗಿ ಅವನು ತನ್ನ ರಾಜ್ಯದ ಉದ್ದಕ್ಕೂ ಅನೇಕ ಅನ್ನಛತ್ರಗಳನ್ನು ಕಟ್ಟಿಸಿದನು; ಅವುಗಳಿಗೆ ಅಗತ್ಯವಿರುವ ಪಾತ್ರೆ-ಪಡಗಗಳು, ದವಸ-ಧಾನ್ಯಗಳು — ಇವೆಲ್ಲದರ ಏರ್ಪಾಡು ಮಾಡಿದ್ದನು. ಕೃತಯುಗದ ಮೋಡವು ನಿರಂತರವಾಗಿ ಧಾರಾಕಾರವಾಗಿ ವರ್ಷವನ್ನು ಸುರಿಸುವಂತೆ, ಇವನು ಸತ್ಪಾತ್ರರಿಗೆ ಕೊಡುಗೆಗಳ ಮಳೆಯನ್ನೇ ನಿರಂತರ ಸುರಿಸುತ್ತಿದ್ದನು. ಅವರವರ ಇಚ್ಛೆಗೆ ಅನುಸಾರವಾಗಿ, ಎಲ್ಲರಿಗೂ ತೃಪ್ತಿಯಾಗುವಂತೆ, ಅವರವರ ಅಗತ್ಯಗಳನ್ನು ಪೂರೈಸುತ್ತಿದ್ದನು. ಆಹಾರ-ಪಾನಗಳನ್ನು ಬಯಸುವವರಿಗೆ ಆಹಾರ-ಪಾನಗಳನ್ನು ಒದಗಿಸುವನು. ಹೀಗೆ ಮಂಚಗಳು, ಆಸನಗಳು, ವಾಸಗೃಹಗಳು, ಭೋಜನ, ಸುಗಂಧ ದ್ರವ್ಯಗಳು, ಬೆಳ್ಳಿ-ಬಂಗಾರದ ಪದಾರ್ಥಗಳು — ಇವನ್ನೆಲ್ಲ ಕೇಳುಗರ ಆವಶ್ಯಕತೆಗೆ ತಕ್ಕಂತೆ ಧಾರಾಳ ನೀಡುತ್ತಿದ್ದನು.

ಭಗವಂತನಾದ ನಮ್ಮ ಪ್ರಭುವಿನ ಕೀರ್ತಿಯು ಶತದಿಕ್ಕುಗಳನ್ನೂ ಆವರಿಸಿತು. ಬೇರೆಬೇರೆ ಪ್ರದೇಶಗಳಲ್ಲಿ ವಾಸಿಸುವ, ಜಗತ್ತಿನ ವಿವಿಧೆಡೆ ಇರುವ ಜನರೆಲ್ಲರೂ ಅವನೆಡೆಗೆ ಬರುತ್ತಿದ್ದರು. ಅವನ ದಾನಗುಣವನ್ನು ಕಂಡು ಆಶ್ಚರ್ಯ ಮತ್ತು ಆನಂದಗಳನ್ನು ತಮ್ಮ ಹೃದಯದಲ್ಲಿ ತುಂಬಿಕೊಂಡು ಹೋಗುತ್ತಿದ್ದರು.

ಧ್ಯಾನಶೀಲರಾದ ಸಂನ್ಯಾಸಿಗಳು ಎಲ್ಲರ ಮುಂದೆ ಬೇಡುವವರಲ್ಲ. ಹಾಗಿದ್ದರೂ ತಮ್ಮ ಆವಶ್ಯಕತೆಗಳಿಗಾಗಿ ಶಿಬಿಯ ಈ ರಾಜನನ್ನು ಸಮೀಪಿಸಲು ಅವರು ಹೇಸುತ್ತಿರಲಿಲ್ಲ. ಇದಕ್ಕೆ ಕಾರಣ, ರಾಜನು ಎಂದೂ ಅವರ ಜೊತೆಗೆ ಗರ್ವದಿಂದ ನಡೆದುಕೊಳ್ಳುತ್ತಿರಲಿಲ್ಲ. ಹೀಗಾಗಿ ನೀರು ಕುಡಿಯಲು ಒಂದು ಜಲಾಶಯವನ್ನು ಆನಂದದಿಂದ ಆನೆಗಳು ಹೊಕ್ಕುವಂತೆ, ಸಂನ್ಯಾಸಿಗಳು ಅವನ ಅರಮನೆಯನ್ನು ಪ್ರವೇಶಮಾಡುತ್ತಿದ್ದರು.

ರಾಜನು ಅವರನ್ನೆಲ್ಲ ನಗುಮುಖದಿಂದ ಹಳೆಯ ಸ್ನೇಹಿತರಂತೆ ಸ್ವೀಕರಿಸುವನು; ಆ ಸಮಯದಲ್ಲಿ ಆನಂದದಿಂದ ಅವನ ಕಣ್ಣುಗಳು ದೊಡ್ಡದಾಗಿ ತೆರೆದುಕೊಂಡಿರುವವು. ಒಂದು ಒಳ್ಳೆಯ ಸಮಾಚಾರವನ್ನು ಕೇಳುವಂತೆ ಅವರ ಬೇಡಿಕೆಗಳನ್ನು ದಿವ್ಯಭಾವದಿಂದ ಆಲಿಸುತ್ತಿದ್ದನು. ದಾನವನ್ನು ಸ್ವೀಕರಿಸಿದವರಿಗಿಂತ ದಾನಕೊಟ್ಟ ರಾಜನೇ ಪರಿಪೂರ್ಣ ಧನ್ಯತೆಯನ್ನೂ, ಸಂತೃಪ್ತಿಯನ್ನೂ ಅನುಭವಿಸುತ್ತಿದ್ದನು.

ಒಂದು ದಿನ ಮಹಾರಾಜನು ತಾನು ದಾನಕೊಡುವ ದೊಡ್ಡ ಪ್ರಾಂಗಣದಲ್ಲಿ ಕುಳಿತುಕೊಂಡಿದ್ದನು. ಅಂದು ಅಷ್ಟೊಂದು ಜನ ಅರ್ಥಿಗಳು ಬಂದಿರಲಿಲ್ಲ. ಅದನ್ನು ಕಂಡು ಅವನ ಮನಸ್ಸಿನಲ್ಲಿ ಏನೋ ಒಂದು ರೀತಿಯ ದುಗುಡ; ಆತಂಕ. ಇಂದು ದಾನ ಮಾಡುವ ಸೇವೆಯು ಸಮರ್ಪಕವಾಗಿ ನಡೆಯುತ್ತಿಲ್ಲವಲ್ಲ ಎಂಬ ಕಳವಳ ಅವನ ಮನಸ್ಸನ್ನು ಕಾಡುತ್ತಿತ್ತು. ದಾನಮಾಡುವ ಅವನ ಉತ್ಸಾಹ ಎಷ್ಟು ಅಧಿಕವಾಗಿತ್ತು ಎಂದರೆ, ದಾನವನ್ನು ತೆಗೆದುಕೊಳ್ಳಲು ಬಂದವರಿಗಿಂತಲೂ ಈತನು ಹೆಚ್ಚು ಉತ್ಸಾಹವನ್ನು ತೋರುತ್ತಿದ್ದನು.



ಹೀಗಿರಲು ಒಂದು ಚಿಂತನೆ ಅವನ ಮನಸ್ಸನ್ನು ಹೊಕ್ಕಿತು: ಅಯ್ಯೋ, ಪುಣ್ಯಜೀವಿಗಳಾದ ತಾಪಸರು ವಿಶ್ವಾಸವಿಟ್ಟು ತಮ್ಮ ಬಯಕೆಗಳನ್ನು, ಯಾವ ನಿಯಂತ್ರಣವೂ ಇಲ್ಲದೆ, ಯಾರಿಗೆ ತೋಡಿಕೊಳ್ಳುತ್ತಾರೆಯೋ, ಅಂಥವರು ನಿಜವಾಗಿಯೂ ದಾನಶೀಲರಲ್ಲಿ ಉತ್ತಮರಲ್ಲವೆ? ಅವರೇ ಧನ್ಯರು! ಅಂಥವರು ಕೇಳಿದರೆ, ತಮ್ಮ ದೇಹದ ಅಂಗಾಂಗಗಳನ್ನೂ ದಾನಮಾಡಲು ಸಿದ್ಧರಿರುತ್ತಾರೆ. ಆದರೆ, ನಾನೆಲ್ಲಿ ಕಟುಮಾತುಗಳನ್ನು ಆಡುವೆನೋ ಎಂದು, ಯಾರೂ ಅಂಥ ದಾನವನ್ನು ನನ್ನ ಹತ್ತಿರ ಕೇಳುವುದೇ ಇಲ್ಲ. ಕೇವಲ ನನ್ನ ಸಂಪತ್ತನ್ನಷ್ಟೇ ಕೇಳಿ ಪಡೆಯುವ ಧೈರ್ಯವನ್ನು ಮಾಡುತ್ತಾರೆ. ಇದು ನನ್ನದೇ ತಪ್ಪಲ್ಲವೆ?

ಇವನ ಈ ಆಲೋಚನೆಯನ್ನು ಮನಗಂಡ ಧರಿಣಿಯೂ ನಡುಗಿದಳು. ರಾಜನು ಧರಿಣೀಪತಿಯಷ್ಟೇ! ಪ್ರಭುವು ತನ್ನ ಅಂಗಾಂಗಗಳ ಮೇಲಿನ ಮಮತೆಯನ್ನು ಕೂಡ ತ್ಯಜಿಸಿಬಿಟ್ಟಿರುವನಲ್ಲವೇ ಎಂದು ದುಗುಡ ಅವಳ ಮನಸ್ಸನ್ನು ಕಾಡಿತು. ಭೂಮಿ ಇದರಿಂದ ಕಂಪಿಸಿತು. ಪರ್ವತಗಳ ನೃಪನಾದ ಸುಮೇರುವೂ ಕೂಡ ಅಲುಗಾಡಲು ಆರಂಭಿಸಿದನು. ದೇವೇಂದ್ರನು ಪರ್ವತಗಳ ಈ ತಲ್ಲಣವನ್ನು ಕುರಿತು ವಿಚಾರಿಸಿದನು. ರಾಜನ ಮನಸ್ಸಿನಲ್ಲಿ ಮೂಡಿದ ಈ ಸತ್ಸಂಕಲ್ಪವೇ ಈ ಭೂಮಿಯ ಮೇಲಿನ ಕೋಲಾಹಲಕ್ಕೆ ಕಾರಣವೆಂದು ಅರಿತನು. ಆಶ್ಚರ್ಯಚಕಿತನಾಗಿ ಅಂತರಂಗದಲ್ಲಿ ಹೀಗೆ ಚಿಂತಿಸಿದನು:

ಇದು ಹೇಗೆ ಸಾಧ್ಯ? ದಾನಕೊಡುವುದರಲ್ಲಿಯೇ ಆನಂದವನ್ನೂ ಸಂತೋಷವನ್ನು ಅವನು ಕಾಣುತ್ತಿರುವುದೇನೋ ಒಳ್ಳೆಯದೇ. ಆದರೆ ತನ್ನ ಶರೀರದ ಅಂಗಾಂಗವನ್ನೇ ದಾನಕೊಡುವ ಸಂಕಲ್ಪ ಅವನ ಮನಸ್ಸಿಗೆ ಬಂದದ್ದಾರೂ ಹೇಗೆ? ಇದು ಎಂಥ ಆಶ್ಚರ್ಯದ ಸಂಗತಿ! ಇಂಥ ನಿಶ್ಚಯವನ್ನು ಮನುಷ್ಯಮಾತ್ರದವನು ಮಾಡಲು ಸಾಧ್ಯವೆ? ಇರಲಿ, ನಾನೇ ಅವನೆಡೆಗೆ ಹೋಗಿ ಪರೀಕ್ಷೆಮಾಡಿ ನೋಡುತ್ತೇನೆ.

ರಾಜನು ಅಂದು ಕಿಕ್ಕಿರಿದ ತನ್ನ ಸಭೆಯಲ್ಲಿ ವಿರಾಜಮಾನನಾಗಿದ್ದನು. ಸಿಂಹಾಸನದಲ್ಲಿ ಕುಳಿತಿದ್ದ ಅವನು, ಯಾರಾದರೂ ದಾನಾರ್ಥಿಗಳು ಬರುವರೇ ಎಂದು ಕಾತುರದಿಂದ ಕಣ್ಣು ಹಾಯಿಸುತ್ತಿದ್ದನು. ದೈನಂದಿನ ಬಿನ್ನಹಗಳು, ರಾಜಕಾರ್ಯಗಳು ನಡೆಯುತ್ತಿದ್ದವು. ದಾನಾರ್ಥಿಗಳು ಬಂದು ಕೇಳಿದ ಹಾಗೆಲ್ಲ , ಬಂಗಾರ-ಬೆಳ್ಳಿಗಳ ಭಂಡಾರವು ತೆಗೆಯಲ್ಪಡುತ್ತಿತ್ತು; ವಿವಿಧ ರೀತಿಯ ಪೋಷಾಕುಗಳ ಉಗ್ರಾಣವನ್ನೇ ತೆರೆದಿಡಲಾಗುತ್ತಿತ್ತು. ಅನೇಕ ಬಗೆಯ ಪ್ರಾಣಿಸಂಕುಲಗಳನ್ನು ದಾನಕ್ಕಾಗಿಯೇ ತಂದಿರಿಸಲಾಗಿತ್ತು. ಅನೇಕ ಜನ ತಾಪಸಿಗಳು ಅಲ್ಲಿ ಬಂದು ನೆರೆದಿದ್ದರು.

ಅವರೆಲ್ಲರ ಮಧ್ಯೆ ಇಂದ್ರನೂ ಇದ್ದನು; ಒಬ್ಬ ವೃದ್ಧ ಅಂಧ ಬ್ರಾಹ್ಮಣನ ವೇಷವನ್ನು ಅವನು ಹಾಕಿಕೊಂಡಿದ್ದನು. ರಾಜನ ದೃಷ್ಟಿ ಅವನೆಡೆಗೆ ತಾಗಿತು. ಅನುಕಂಪ ಮತ್ತು ಸ್ನೇಹಭಾವಗಳ ಪ್ರವಾಹವೇ ಆ ಕಣ್ಣುಗಳ ಮೂಲಕ ವೃದ್ಧಬ್ರಾಹ್ಮಣನತ್ತ ಪ್ರವಹಿಸುತ್ತಿತ್ತು. ಪ್ರೀತಿಯಿಂದ ಆಲಿಂಗಿಸುವುದಕ್ಕೆ ತವಕಿಸಿರುವಂತೆ ಆ ನೋಟವಿತ್ತು. ರಾಜಭಟರು ಆ ಬ್ರಾಹ್ಮಣನನ್ನು ತನಗೆ ಬೇಕಾದುದನ್ನು ಕೇಳುವಂತೆ ಪ್ರಾರ್ಥಿಸಿಕೊಂಡರು. ಆದರೆ ಅವನು ಮೌನವಾಗಿಯೇ ರಾಜನ ಬಳಿಗೆ ಸಾರಿದನು; ಅವನ ಸನಿಹಕ್ಕೆ ಬಂದನು. ರಾಜನಿಗೆ ಆಶೀರ್ವಾದಪೂರ್ವಕವಾದ ಮಂಗಳ ವಚನಗಳನ್ನು ಹೇಳಿದನು. ತದನಂತರ ತನ್ನ ಬೇಡಿಕೆಯನ್ನು ಮುಂದಿಟ್ಟನು:

‘‘ಪ್ರಭುವೇ, ಕಣ್ಣಿಲ್ಲದ ಮುದುಕನಾದ ನಾನು ರಾಜಕುಲೋತ್ತುಂಗನಾದ ನಿನ್ನ ಬಳಿ ಬಂದಿದ್ದೇನೆ. ನಿನ್ನ ಲೌಕಿಕ ವ್ಯವಹಾರಗಳನ್ನು ಸಾಗಿಸುವುದಕ್ಕೆ ಒಂದು ಕಣ್ಣು ಸಾಕೆಂದು ನನ್ನ ಅನಿಸಿಕೆ. ಏನು ಹೇಳುತ್ತೀಯೆ ರಾಜೇಂದ್ರ, ಇನ್ನೊಂದು ಕಣ್ಣನ್ನು ನನಗೆ ದಾನಮಾಡುವೆಯಾ?’’

ಬೋಧಿಸತ್ವನು ಆ ವೃದ್ಧನ ಮಾತುಗಳನ್ನು ಕೇಳಿ ತನ್ನ ಹೃದಯಾಂತರಂಗದಲ್ಲಿ ಅತೀವ ಸಂತೋಷವನ್ನು ಅನುಭವಿಸಿದನು. ಆದರೂ ಒಂದು ಸಂದೇಹವು ಅವನನ್ನು ಕಾಡಿತು. ಈ ಮಾತುಗಳನ್ನು ಈ ವೃದ್ಧನು ನಿಜವಾಗಿಯೂ ಆಡಿದನೆ? ತನ್ನ ಬಳಿ ಬಂದು ಕಣ್ಣನ್ನು ಕೇಳುವ ಆಲೋಚನೆ ಅವನಿಗೆ ಬಂದದ್ದಾದರೂ ಹೇಗೆ? ತನ್ನ ಬಳಿಗೆ ಬರುವಂತೆ ಇವನಿಗೆ ಮಾರ್ಗದರ್ಶನ ಮಾಡಿದ್ದಾದರೂ ಯಾರು? ತನ್ನ ಸಂದೇಹವನ್ನು ರಾಜನು ವೃದ್ಧನ ಮುಂದಿಟ್ಟನು.

ಇದಕ್ಕೆ ಆ ವೃದ್ಧನು ಹೇಳಿದನು: ‘‘ಪ್ರಭೂ, ದೇವೇಂದ್ರನೇ ನನಗೆ ಈ ಸಲಹೆಯನ್ನು ಕೊಟ್ಟನು. ನಾನು ಪೂಜಿಸುತ್ತಿದ್ದ ಅವನ ದೇವತಾಮೂರ್ತಿಯು ನನಗೆ ಹೀಗೆ ಆದೇಶಿಸಿತು. ಈಗ ಅವನ ಅಭಿಪ್ರಾಯವನ್ನು ನಡೆಸುತ್ತೀಯೋ, ಇಲ್ಲವೋ ಅದು ನಿನಗೆ ಬಿಟ್ಟ ವಿಷಯ.’’

ದೇವೆಂದ್ರನ ಹೆಸರನ್ನು ಕೇಳಿ ರಾಜನ ಮನಸ್ಸಿನಲ್ಲಿ ಈ ಆಲೋಚನೆಯು ಮೂಡಿತು: ದೈವಬಲದಿಂದಲೇ, ಈ ರೀತಿಯಲ್ಲಿ ಬ್ರಾಹ್ಮಣನು ತನ್ನ ದೃಷ್ಟಿಯನ್ನು ಮತ್ತೆ ಪಡೆಯುತ್ತಾನೆ.

ಅವನು ಆ ವೃದ್ಧನಿಗೆ ಹೇಳಿದನು: ''ಪೂಜ್ಯರಾದ ಬ್ರಾಹ್ಮಣರೇ, ಖಂಡಿತವಾಗಿಯೂ ನಿಮ್ಮ ಇಚ್ಛೆಯನ್ನು ನಾನು ಪೂರೈಸುತ್ತೇನೆ. ನೀವು ಕೇವಲ ಒಂದು ಕಣ್ಣನ್ನು ಕೇಳಿದ್ದೀರಿ ತಾನೇ; ನಾನು ಮನಃಪೂರ್ವಕವಾಗಿ ನನ್ನ ಎರಡೂ ಕಣ್ಣುಗಳನ್ನು ದಾನ ಮಾಡುತ್ತೇನೆ. ದಯವಿಟ್ಟು ಸ್ವೀಕರಿಸಿರಿ.''

ಈ ಮಾತುಗಳನ್ನು ಕೇಳಿ, ಸಭಾಸದರೆಲ್ಲರೂ ದಂಗಾಗಿ ಹೋದರು. ಎಲ್ಲರ ಮನಸ್ಸಿನಲ್ಲಿ ದುಗುಡ ಆವರಿಸಿತು; ಕಣ್ಣುಗಳು ದುಃಖದಿಂದ ತೇವವಾದವು. ಅವರೆಲ್ಲರೂ ಈ ಸಂಕಲ್ಪವನ್ನು ಕೈಬಿಡುವಂತೆ ರಾಜನಲ್ಲಿ ಬಹಳವಾಗಿ ಪ್ರಾರ್ಥಿಸಿಕೊಂಡರು. ''ಈ ಬ್ರಾಹ್ಮಣನ ಸಲುವಾಗಿ ನೀನು ನಮ್ಮನ್ನು ಅನಾಥರನ್ನಾಗಿ ಮಾಡಬಾರದು. ನಿನ್ನ ಪ್ರಜೆಗಳನ್ನು ದುಃಖಿತಪ್ತರನ್ನಾಗಿ ಮಾಡಬಾರದು. ಇವರೆಲ್ಲರಿಗೂ ನೀನು ಅದೆಷ್ಟು ಸಮೃದ್ಧಿ ಮತ್ತು ಸಂತೋಷಗಳನ್ನು ತಂದುಕೊಟ್ಟಿದ್ದೀಯೆ! ಇದಲ್ಲದೆ, ಮಹಾರಾಜ! ಒಬ್ಬರ ಕಣ್ಣುಗ್ಗಳನ್ನು ಇನ್ನೊಬ್ಬರಲ್ಲಿ ಇಡುವುದು ಅದು ಹೇಗೆ ತಾನೇ ಸಾಧ್ಯ? ದಿವ್ಯಶಕ್ತಿಯಿಂದ ಅದು ಸಾಧ್ಯವಾದರೂ, ಅದಕ್ಕಾಗಿ ನಿನ್ನ ಕಣ್ಣುಗಳೇ ಬೇಕೇನು? ನೇರವಾಗಿ ಆ ದೈವವೇ ಅವನಿಗೆ ಕಣ್ಣುಗ್ಗಳನ್ನು ತಂದುಕೊಡಲಿ. ಅಷ್ಟಕ್ಕೂ ಈ ಬಡ ವೃದ್ಧನಿಗೆ ಏಕೆ ತಾನೇ ಕಣ್ಣುಗ್ಗಳು ಬೇಕು? ಅವನು ತನ್ನ ಉಳಿದ ಜೀವನದಲ್ಲಿ ನೋಡಲಿಕ್ಕೆ ಇರುವುದಾದರೂ ಏನು? ಅವನಿಗೆ ಎಷ್ಟು ಬೇಕಾದರೂ ಧನಸಹಾಯವನ್ನು ಮಾಡು; ಆದರೆ ದಯವಿಟ್ಟು ಈ ಅವಸರದ ಕಾರ್ಯವನ್ನು ಕೈಗೊಂಡು ಅನಾಹುತ ಮಾಡಿಕೊಳ್ಳಬೇಡ.''

ಇಷ್ಟನ್ನು ಆಲಿಸಿದ ರಾಜನು ತನ್ನೆಲ್ಲ ಮಂತ್ರಿಗಳನ್ನು ಉದ್ದೇಶಿಸಿ, ಮಧುರವಾದ ಮಾತುಗಳನ್ನು ಆಡಿದನು:

''ಯಾರೊಬ್ಬ ದಾನ ಮಾಡುತ್ತೇನೆಂದು ನಿಶ್ಚಯಮಾಡಿ, ಅದರಿಂದ ಹಿಂಜರಿಯುತ್ತಾನೆಯೋ, ಅವನು ತಾನು ತಿರಸ್ಕರಿಸಿದ ಸ್ವತ್ತನ್ನು ಮತ್ತೆ ಪಡೆದುಕೊಳ್ಳುವ ದುಷ್ಟನಂತೆ ಆಗುತ್ತಾನೆ. ಅವನು ಮನುಷ್ಯರಲ್ಲೆಲ್ಲ ಅತ್ಯಂತ ನೀಚನೇ ಸರಿ. ಮಹಾತ್ಮರಿಗೆ ಆಸೆಯನ್ನು ತೋರಿಸಿ, ಅವರಿಗೆ ನಿರಾಸೆಯನ್ನು ಉಂಟುಮಾಡುವವನ ಬಗ್ಗೆ ಏನು ತಾನೇ ಹೇಳುವುದು? ನೇರವಾಗಿ ದೈವವೇ ಈ ಬ್ರಾಹ್ಮಣನಿಗೆ ಕಣ್ಣುಗ್ಗಳನ್ನು ದೊರಕಿಸಿಕೊಡಲಿ ಎಂದು ನೀವು ಹೇಳುತ್ತೀರಿ. ಆ ದೈವವೇ ಈ ಪುಣ್ಯಕಾರ್ಯಕ್ಕೆ ನನ್ನನ್ನು ನಿಮಿತ್ತವನ್ನಾಗಿ ಮಾಡಿರಬಾರದೇಕೆ? ಆದ್ದರಿಂದ ನನ್ನ ಈ ಸಂಕಲ್ಪದ ದೆಸೆಯಿಂದ ನೀವಾರೂ ವಿಚಲಿತರಾಗುವುದು ಬೇಡ. ನಾನು ಒಂದು ಅದ್ಭುತವಾದ ಕಾರ್ಯದಲ್ಲಿ ತೊಡಗಿದ್ದೇನೆ. ದಯವಿಟ್ಟು ಇದರಲ್ಲಿ ಅಡ್ಡಿ ತರಬೇಡಿ.''

ಆಗ ಮಂತ್ರಿಗಳು ಹೇಳುತ್ತಾರೆ: ''ನೀನು ಧನಕನಕಗಳನ್ನು ಅಥವಾ ಹಣವನ್ನು ದಾನಮಾಡಲು ನಾವು ಅಡ್ಡಿ ಬರಲಿಲ್ಲ. ಅಮೂಲ್ಯವಾದ ನಿನ್ನ ಕಮಲದಂಥ ನೇತ್ರಗಳನ್ನು ಮಾತ್ರ ದಾನಮಾಡಬೇಡ ಎಂದಷ್ಟೇ ನಾವು ಪ್ರಾರ್ಥಿಸಿಕೊಳ್ಳುತ್ತಿದ್ದೇವೆ.''

ಅವರನ್ನು ಸಮಾಧಾನಪಡಿಸುತ್ತ ರಾಜನು ಹೇಳುತ್ತಾನೆ: ''ಕೇಳಿ ಬಂದವರು ಏನನ್ನು ಕೇಳುತ್ತಾರೆಯೋ, ಅದನ್ನೇ ನಾನು ಕೊಡಬೇಕೇ ಹೊರತು, ಅವರು ಕೇಳದೆ ಇರುವುದನ್ನಲ್ಲ. ಇತರರಿಗೆ ಅವಶ್ಯವಿಲ್ಲದ ವಸ್ತುಗಳನ್ನು ನೀಡುವುದು ದಾನವೇ ಅಲ್ಲ. ನದಿಯ ಪಕ್ಕದಲ್ಲಿಯೇ ವಾಸಿಸಿಕೊಂಡಿರುವವನಿಗೆ ನೀರನ್ನು ದಾನ ಮಾಡುವ ಆವಶ್ಯಕತೆ ಇದೆಯೆ? ಆದ್ದರಿಂದ ಈ ವೃದ್ಧನು ಕೇಳಿದ್ದನ್ನೇ ನಾನು ಅವನಿಗೆ ನೀಡುತ್ತೇನೆ.''

ಇಷ್ಟಾದರೂ ಮಂತ್ರಿಗಳೆಲ್ಲರೂ ಸೇರಿ ಪರಿಪರಿಯಾಗಿ ಕಣ್ಣುಗಳನ್ನು ದಾನಮಾಡದೆ ಇರುವಂತೆ ಅವನನ್ನು ಗೋಗೆರೆದುಕೊಂಡರು. ಅವನ ರಾಜ್ಯದ ಸಂಪತ್ತನ್ನು ಕೊಂಡಾಡಿದರು. ಪ್ರಜಾಕ್ಷೇಮದ ಬಗ್ಗೆ ಅವನ ಗಮನ ಸೆಳೆದರು. ಇಷ್ಟಾದರೂ ಅವನು ತನ್ನ ನಿಶ್ಚಯದಿಂದ ಸ್ವಲ್ಪವೂ ಚ್ಯುತಿಗೊಳ್ಳಲಿಲ್ಲ. ಅವನು ಖಡಾಖಂಡಿತವಾಗಿ ಹೀಗೆ ಹೇಳಿಬಿಟ್ಟನು: ''ಅಖಂಡ ಭೂಭಾಗದ ಸಾಮ್ರಾಜ್ಯವೂ ನನಗೆ ಬೇಡ; ಅದಕ್ಕಾಗಿ ನಾನು ಪ್ರಯತ್ನ ಮಾಡುತ್ತಿಲ್ಲ. ನನಗೆ ಸ್ವರ್ಗವೂ ಬೇಡ, ನಿರ್ವಾಣವೂ ಬೇಡ. ಯಾವ ರೀತಿಯ ಕೀರ್ತಿಕಾಮನೆಗಳಲ್ಲಿಯೂ ನನಗೆ ಆಸಕ್ತಿಯಿಲ್ಲ. ಈ ವೃದ್ಧ ಬ್ರಾಹ್ಮಣನು ನಿರಾಸೆಯಿಂದ ಹಿಂದಿರುಗಬಾರದು ಎನ್ನುವುದೊಂದೇ ನನ್ನ ಏಕಮಾತ್ರ ಇಚ್ಛೆ.''

ನಂತರ ತನ್ನ ತಾವರೆಯಂಥ ಅಂದದ ಕಣ್ಣುಗಳನ್ನು ಕಿತ್ತು ಬಿಡುವಂತೆ ಅವನು ತನ್ನ ಅನುಚರರಿಗೆ ಆದೇಶಿಸುತ್ತಾನೆ. ಕಿತ್ತ ಕಣ್ಣುಗಳನ್ನು ಸಂತೋಷದಿಂದ ಬ್ರಾಹ್ಮಣನಿಗೆ ದಾನವಾಗಿ ಕೊಟ್ಟು ಬಿಡುತ್ತಾನೆ. ದೇವೇಂದ್ರನು ತನ್ನ ಮಾಯಾಬಲದಿಂದ, ಆ ಕಣ್ಣುಗಳು ವೃದ್ಧ ಬ್ರಾಹ್ಮಣನಲ್ಲಿ ನೆಡುವಂತೆಯೂ, ಅವನಿಗೆ ಅವು ದೃಷ್ಟಿಯ ಬೆಳಕನ್ನು ನೀಡುವಂತೆಯೂ ಮಾಡುತ್ತಾನೆ. ರಾಜನ ಮುಖವು ಕಮಲಪುಷ್ಪಗಳು ಕಿತ್ತುಹಾಕಿದ ದೊಡ್ಡ ಕೊಳದಂತೆ ಇತ್ತು. ಆದರೆ ಅಪಾರಶಾಂತಿ, ನೆಮ್ಮದಿ ಮತ್ತು ತೃಪ್ತಿಯ ಭಾವನೆಯಿಂದ ಬೆಳಗುತ್ತಿತ್ತು. ಇತ್ತ ವೃದ್ಧಬ್ರಾಹ್ಮಣನು ಕೂಡ ತನ್ನ ಶಕ್ತಿಯುತ ಕಣ್ಣುಗಳಿಂದ ಎಲ್ಲವನ್ನೂ ನೋಡಲು ಶಕ್ತನಾದನು.

ಆ ಅರಮನೆಯ ಅಂತಃಪುರದಲ್ಲಿಯೂ ಹೊರಗಡೆಯೂ ರಾಜನ ಪತ್ನಿಯರ, ಭಂಟರ, ಪ್ರಜೆಗಳ ಕಣ್ಣೀರು ಧಾರಾಕಾರವಾಗಿ ಸುರಿದು ನೆಲವು ತೇವವಾಯಿತು. ಆದರೆ ಇಂದ್ರನು ಸಂಬೋಧಿಯೆಂಬ ಹೆಸರಿನಿಂದ ಕರೆಯುವ ಅತ್ಯುನ್ನತ ಜ್ಞಾನವನ್ನು ಹೊಂದುವ ಬೋಧಿಸತ್ವನ ದೃಢಸಂಕಲ್ಪವನ್ನು ಕಂಡು ಹೆಮ್ಮೆಪಟ್ಟನು : ಎಂಥ ದೃಢನಿರ್ಧಾರ ಇವನದು! ಸಕಲ ಜೀವಿಗಳಿಗೂ ಲೇಸನ್ನು ಬಯಸುವ ಇಂಥ ಒಳ್ಳೆಯತನ ಮತ್ತು ಕಾತರತೆ! ನಾನೇ ಕಣ್ಣಾರೆ ಈ ಅದ್ಭುತ ದೃಶ್ಯವನ್ನು ನೋಡಿದ್ದರೂ, ನನಗೇ ಇದನ್ನು ನಂಬಲು ಆಗುತ್ತಿಲ್ಲ! ಇಂಥ ಮಹೋತ್ತಮ ವ್ಯಕ್ತಿಯು ಇನ್ನಷ್ಟು ನೋವನ್ನು ಅನುಭವಿಸಬಾರದು. ಸ್ವಲ್ಪಕಾಲವಾಗಲಿ; ನಾನು ಅವನಿಗೆ ಮತ್ತೆ ದೃಷ್ಟಿಯನ್ನು ದಯಪಾಲಿಸುತ್ತೇನೆ ಎಂದು ಅವನು ಅಂದುಕೊಂಡನು.

ನಿಧಾನವಾಗಿ ರಾಜನ ಕಣ್ಣುಗಳ ಗಾಯವು ಇಂಗಿತು. ಒಂದು ದಿನ ರಾಜನು, ಕಮಲದ ಹೂವುಗಳು ತುಂಬಿರುವ ಕೊಳದ ಅಂಚಿನಲ್ಲಿ ಕುಳಿತು ಗಾಢ ಧ್ಯಾನಮಗ್ನನಾಗಿದ್ದನು. ಹಠಾತ್ತನೆ ದೇವೇಂದ್ರನು ಅವನ ಮುಂದೆ ಬಂದು ನಿಂತನು. ''ನಾನು ದೇವೇಂದ್ರ, ನಿನ್ನನ್ನು ನೋಡಲು ಬಂದಿದ್ದೇನೆ'' ಎಂದನು. ರಾಜನು ಅವನನ್ನು ಸ್ವಾಗತಿಸಿದನು.

ಇಂದ್ರನು ಹೇಳಿದನು: ''ಹೇ ರಾಜರ್ಷಿ, ಯಾವುದಾದರೂ ಒಂದು ವರವನ್ನು ಕೇಳಿಕೋ.'' ಇದನ್ನು ಕೇಳಿ ರಾಜನು ಆಶ್ಚರ್ಯಗೊಂಡನು. ''ದೇವೇಂದ್ರ, ನನ್ನ ಸೈನ್ಯ ಬಲಿಷ್ಠವಾದುದು; ನನ್ನ ಸಂಪತ್ತು ಸರ್ವಾಧಿಕವಾದದ್ದು. ಇಷ್ಟಾದರೂ ನನ್ನ ಈ ಕುರುಡುತನ ನನ್ನನ್ನು ಸಾವಿನ ಅಂಚಿಗೆ ಕೊಂಡೊಯ್ದುಬಿಟ್ಟಿದೆ. ಪ್ರತಿನಿತ್ಯವೂ ನನ್ನಿಂದ ಕೊಡುಗೆಗಳನ್ನು ಪಡೆಯುವ ಮಹಾತ್ಮರ ಸಂತೋಷದ ಮುಖಗಳನ್ನು ನೋಡುತ್ತ, ನಾನು ಆನಂದಪಡುತ್ತಿದ್ದೆನು. ಅದನ್ನು ನಾನು ಈಗ ಕಳೆದುಕೊಂಡಿದ್ದೇನೆ. ಹೀಗಾಗಿ ನನಗೆ ಸಾವೇ ಲೇಸೆಂದು ತೋರುತ್ತಿದೆ.''

ಇಂದ್ರನು ಹೇಳಿದನು: ''ಮಹಾರಾಜ, ಹಾಗೆ ನಿಶ್ಚಯಿಸದಿರು. ಆದರೆ ನನ್ನದೊಂದು ಪ್ರಶ್ನೆಗೆ ಉತ್ತರವನ್ನು ಹೇಳು. ನಿನ್ನ ಈ ಸ್ಥಿತಿಗೆ ಕಾರಣ, ಆ ತಾಪಸಿಗಳೇ ಅಲ್ಲವೇನು? ಈಗಲೂ ಅವರೇ ನಿನ್ನ ಮನಸ್ಸಿನಲ್ಲಿ ತುಂಬಿಕೊಂಡಿದ್ದಾರೆ. ಇದಕ್ಕೆ ಕಾರಣವಾದರೂ ಏನು? ಇದು ಅದ್ಭುತವೇ ಸರಿ. ಈಗ ನಿನ್ನ ಇಚ್ಛೆ ಏನು? ನಿನ್ನ ಸಮಸ್ಯೆಗೆ ಪರಿಹಾರವನ್ನು ಕೇಳಿಕೋ.''

ಇದಕ್ಕೆ ರಾಜನು ನುಡಿದನು: ''ದೇವೇಂದ್ರ, ನಿನ್ನ ಮಾತುಗಳು ಆಶೀರ್ವಾದದಂತೆ ನನಗೆ ತೋರುತ್ತಿವೆ. ದಯವಿಟ್ಟು ನನ್ನ ಒಂದು ಕಣ್ಣು ಕಾಣುವಂತೆ ಮಾಡು.''

ಹೀಗೆಂದ ಒಡನೆ, ಒಂದು ಕಣ್ಣಿನ ದೃಷ್ಟಿ ಮರುಕಳಿಸಿತು. ಇದರಿಂದ ಸಂತೋಷಗೊಂಡ ರಾಜನು, ಮತ್ತೊಂದು ಕಣ್ಣಿನ ದೃಷ್ಟಿಗಾಗಿ ಕೇಳಿಕೊಂಡನು. ದೇವೇಂದ್ರನು ಅದನ್ನೂ ದಯಪಾಲಿಸಿದನು. ಎರಡೂ ಕಣ್ಣುಗಳಿಂದ ಅವನು ಸ್ಪಷ್ಟವಾಗಿ ನೋಡುವ ಹಾಗೆ ಆದನು.

ಇಡೀ ಭೂಮಿಯೇ ಹರ್ಷದಿಂದ ಕಂಪಿಸಿತು. ಸಮುದ್ರದ ಅಲೆಗಳು ಹೊಯ್ದಾಡಿದವು; ದೇವಲೋಕದ ದುಂದುಭಿಗಳು ಭೋರ್ಗರೆದವು. ಆಕಾಶವು ನಿರ್ಮಲವೂ ಪ್ರಶಾಂತವೂ ಆಗಿ ಕಾಣಿಸಿತು; ಸೂರ್ಯನು ಪರಿಶುದ್ಧ ಪ್ರಕಾಶದಿಂದ ಪ್ರಜ್ವಲಿಸಿದನು. ಬಿರಿದ ಹೂವುಗಳ ಸುಗಂಧ ಎಲ್ಲೆಡೆ ಪಸರಿಸಿತು; ದೇವಲೋಕದಿಂದ ಆ ಸ್ಥಳದ ಮೇಲೆ ಪುಷ್ಪವೃಷ್ಟಿಯಾಯಿತು. ಗಂಧರ್ವರು, ಅಪ್ಸರೆಯರು ಅಲ್ಲಿ ಮೇಳವಿಸಿದರು; ಎಲ್ಲ ಜೀವಿಗಳ ಹೃದಯದಲ್ಲಿ ಆನಂದ ಹೊರಹೊಮ್ಮಿತು. ❖

## ‘ಕೈಹಿಡಿದು ನಡೆಸೆನ್ನನು..’

ವೃಂದಾವನದಿಂದ ತೀರ್ಥಯಾತ್ರೆಗಾಗಿ ಹಿಮಾಲಯಕ್ಕೆ ತೆರಳಿದ ಸ್ವಾಮಿ ಸುಬೋಧಾನಂದರು ಕೇದಾರನಾಥ ಬದರೀನಾಥಗಳಿಗೆ ಭೇಟಿಕೊಟ್ಟರು. ಹರಿದ್ವಾರದಲ್ಲಿ ತಪಸ್ಸು ಮಾಡುತ್ತಿದ್ದಾಗ ನಡೆದ ಘಟನೆಯನ್ನು ಅವರೇ ಹೀಗೆ ಹೇಳುತ್ತಾರೆ:

''ನಾನು ಜ್ವರದಿಂದ ನರಳುತ್ತ ಎರಡು ತಿಂಗಳ ಕಾಲ ಆಗಿತ್ತು. ಎಷ್ಟು ದುರ್ಬಲನಾಗಿದ್ದೆ ಎಂದರೆ ಕಮಂಡಲವನ್ನೆತ್ತಿ ನೀರನ್ನು ಬಾಯಿಗೆ ಹಾಕಿಕೊಳ್ಳಲೂ ಆಗುತ್ತಿರಲಿಲ್ಲ. ಒಂದು ರಾತ್ರಿ, ಬಾಯಾರಿಕೆಯನ್ನು ಹಿಂಗಿಸಿಕೊಳ್ಳಲು ಕಮಂಡಲದ ಹತ್ತಿರ ಹೋದಾಗ ಪ್ರಜ್ಞಾಹೀನನಾಗಿ ನೆಲದ ಮೇಲೆ ಬಿದ್ದುಬಿಟ್ಟೆ. ಪ್ರಜ್ಞೆ ತಿಳಿದಾಗ ನನಗೆ ಬಹು ಸಂಕಟವಾಗುತ್ತಿತ್ತು. ‘ಗುರುವೆ, ನಾನು ಬಹಳ ಯಾತನೆ ಪಡುತ್ತಿದ್ದೇನೆ. ನನ್ನನ್ನು ನೋಡಿಕೊಳ್ಳಲು ಯಾರೂ ಇಲ್ಲ. ನೀರು ತೆಗೆದುಕೊಂಡು ಕುಡಿಯುವಷ್ಟು ಶಕ್ತಿಯನ್ನೂ ನೀವು ನನಗೆ ಕೊಡುತ್ತಿಲ್ಲ’ ಎಂದು ಅಳುತ್ತ ಪುನಃ ನಿದ್ರೆ ಮಾಡಿದೆ. ಆಗ (ದರ್ಶನ ಅಥವಾ ಕನಸಿನಲ್ಲಿ) ಶ್ರೀರಾಮಕೃಷ್ಣರು ನನ್ನ ಶರೀರವನ್ನು ತಟ್ಟುತ್ತ, ‘ಏಕೆ ಆತಂಕಪಟ್ಟುಕೊಳ್ಳುತ್ತೀ? ನಾನು ನಿನ್ನ ಬಳಿಯೇ ಇರುವುದು ನಿನಗೆ ಗೊತ್ತಾಗುತ್ತಿಲ್ಲವೆ? ನಿನಗೇನು ಬೇಕು – ಸೇವಕರೆ, ಹಣವೆ?’ ಎಂದರು. ನಾನು, ‘ನನಗೆ ಅದಾವುದೂ ಬೇಡ. ಶರೀರವಿರುವ ತನಕ ಕಾಯಿಲೆ ಇದ್ದದ್ದೇ. ನಿಮ್ಮನ್ನು ನಾನು ಮರೆಯದಿದ್ದರೆ ಸಾಕು: ಅಷ್ಟೇ ನನ್ನ ಅಪೇಕ್ಷೆ. ನಾನು ಹೋದಲ್ಲೆಲ್ಲ ನೀವು ನನ್ನೊಡನೆಯೇ ಇರಬೇಕು’ ಎಂದು ಮಾರುತ್ತರ ಕೊಟ್ಟೆ.

''ಬೆಳಗ್ಗೆ ಮುಂಚೆಯೇ ಹೊರಗಿನಿಂದ, ‘ಸ್ವಾಮಿ, ದಯವಿಟ್ಟು ಬಾಗಿಲು ತೆರೆಯಿರಿ’ ಎಂದು ಯಾರೋ ಕರೆದಂತಾಯಿತು. ನಾನು ಮೇಲೆದ್ದು ಬಾಗಿಲು ತೆರೆದೆ. ಬಂದಿದ್ದ ತರುಣ ಸಂನ್ಯಾಸಿಯೊಬ್ಬ, ‘ನಿಮಗೇನು ಬೇಕು ಹೇಳಿ. ನಾನು ಭಿಕ್ಷೆಬೇಡಿ ತರುವೆ’ ಎಂದನು. ನಾನು ಅವನಿಗೆ, ‘ನನಗೇನೂ ಬೇಡ’ ಎಂದು ಹೇಳಿದೆ. ‘ನನ್ನ ಬಗ್ಗೆ ನಿನಗೆ ಹೇಗೆ ಗೊತ್ತು?’ ಎಂದು ಕೇಳಿದಾಗ ಅವನು, ತಾನು ಎರಡು ದಿನಗಳ ಹಿಂದೆ ಅಲ್ಲಿಯ ಬ್ರಹ್ಮಕುಂಡಕ್ಕೆ ಯಾವುದೋ ಧಾರ್ಮಿಕ ಕರ್ಮವನ್ನು ಮಾಡಲು ಬಂದಿದ್ದನೆಂದೂ, ಕಳೆದ ರಾತ್ರಿ, ತಾಯಿ ದುರ್ಗೆ ಕನಸಿನಲ್ಲಿ ಕಾಣಿಸಿಕೊಂಡು ಈ ಕರ್ಮವನ್ನು ಮಾಡುವುದಕ್ಕಿಂತ ಆ ಕುಟಿಯಲ್ಲಿ ಕಾಯಿಲೆ ಮಲಗಿರುವ ಸಂನ್ಯಾಸಿಯ ಸೇವೆ ಮಾಡಿದರೆ ನಿನಗೆ ಹೆಚ್ಚು ಪುಣ್ಯ ಲಭಿಸುತ್ತದೆ ಎಂದಂತಾಯಿತು; ಆದರಿಂದಾಗಿ ಇಲ್ಲಿಗೆ ಬಂದೆ; ಕನಸು ನಿಜವಾಯಿತು ಎಂದನು. ನನ್ನ ಕಣ್ಣುಗಳಲ್ಲಿ ಕಂಬನಿ ತುಂಬಿತು. ನನ್ನನ್ನು ನಾನು ನಿಯಂತ್ರಿಸಿಕೊಂಡು, ಆ ತರುಣ ಸಂನ್ಯಾಸಿಗೆ ‘ನನ್ನಷ್ಟಕ್ಕೆ ನನ್ನನ್ನು ಬಿಡು’ ಎಂದು ಕೇಳಿಕೊಂಡೆ.''

*(ದೇವರೊಡನೆ ಬಾಳಿದವರು, ಸಂಪುಟ ೧, ಪು. ೬೩೪–೩೫)*